Sahitya Akademi Award-2024, Udayakala, Dt.19.12.2024

# ಕೆ.ವಿ.ನಾರಾಯಣರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಬೆಂಗಳೂರು: ಕನ್ನಡದ ಖ್ಯಾತ ಸಾಹಿತಿ, ವಿಮರ್ಶಕರಾದ ಪ್ರೊ.ಕೆ.ವಿ. ನಾರಾಯಣ ಅವರಿಗೆ ಪ್ರಸಕ್ತ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರ ಬರೆದ ನುಡಿಗಳ ಅಳಿವು ಕೃತಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯು 2024 ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಬುಧವಾರ ಘೋಷಣೆ ಮಾಡಿದ್ದು, 21 ಭಾಷೆಗಳ 8 ಕವನ ಸಂಕಲನಗಳು, 2 ಸಣ್ಣ ಕಥಾ ಸಂಕಲನಗಳು, 3 ಪ್ರಬಂಧ, 3 ಸಾಹಿತ್ಯ ವಿಮರ್ಶೆ, 1 ನಾಟಕ ಮತ್ತು 1 ಸಂಶೋಧನಾ ಗ್ರಂಥವನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕನ್ನಡದ ಕೆ.ವಿ.ನಾರಾಯಣ ಅವರ ನುಡಿಗಳ ಅಳಿವು ಕೃತಿಗೆ ಈ ಗೌರವ ದೊರೆತಿದೆ.